ಕನಕದಾಸರ ಪದಗಳು

CC-0. In Public Domain. Digitized by eGangotri



ವಿ.ವಿ.ಎಸ್. ಕರಡಿ ಬುಕ್ ಸೇಲರ್, ಹುಬ್ಬಳ್ಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕನಕದಾಸರ ಕೀರ್ತನೆಗಳು

೧ ರಾಗ ಮೋಹನ ಆಟತಾಳ

ನಮ್ಮಮ್ಮ ಶಾರದೆ ಉಮಾ ಮಹೇಶ್ವರಿ | ನಿಮ್ಮೊಳಗಿಹನ್ಯಾರಮ್ಮ ॥ಪ॥ ಕಮಗೋಲನ ಮೈರೆಸುತನಾದ ಸೊಂಡಿಲ | ಹೆಮ್ಮಯ್ಯ ಗಣನಾರ್ಥನೆ ॥ಅ॥ ಮೊರೆ ಕಪ್ಪಿನ ಛಾವ ಮೊರಗದು ಕಿವಿ | ಕೊರದಾಡೆಯವನ್ಯಾರಮ್ಮ ॥ ಮೂರು ಕಣ್ಣಿನ ಸುತ ಮುರಿದಿಟ್ಟ ಚಂದ್ರನ | ಧೀರೆ ತಾ ಗಣನಾಥನೆ ಅಮ್ಮಯ್ಯ ॥೧॥ ಉಟ್ಟದಟ್ಟಿಯು ಬಿಗಿದುಟ್ಟ ಚಲ್ಲಣದ | ದಿಟ್ಟ ತಾನಿವನ್ಯಾರಮ್ಮ ॥ಶಿವನ॥ ಪಟ್ಟದ ರಾಣಿ ಪಾರ್ವತಿಯ ಕುಮಾರ | ಹೊಟ್ಟೆಯ ಗಣನಾಥನ ಅಮ್ಮಯ್ಯ ॥೨॥ ರಾಶಿವಿದ್ಯೆಯ ಬಲ್ಲ ರಮಣಿ ಹಂಬರನೊಲ್ಲ | ಭಾಷಿಗನಿವನ್ಯಾರಮ್ಮ ॥ ಲೇಸಾಗಿ ಸುಜನರ ಸಲಹುವ ನೆಲೆಯಾದಿ ಕೇಶವ ದಾಸ ಕಾಣೆ ಅಮ್ಮಯ್ಯ ॥೩॥

೨ ರಾಗ ಕಲ್ಯಾಣಿ ಆದಿತಾಳ

ಈಶ ನಿನ್ನ ಚರಣ ಭಜನೆ ಇ ಆಸೆಯಿಂದ ಮಾಡುವೆನ | ದೋಷರಾಶಿ ನಾಶ ಮಾಡು ಶ್ರೀ ಕೇಶವ ॥ಪ॥ ಚರಣ ಹೊಕ್ಕೆನಯ್ಯ ಎನ್ನ | ಮರಣ ಸಮಯದಲ್ಲಿ ನಿನ್ನ | ಚರಣ ಸ್ಮರಣೆ ಕಾಣಿಸಯ್ಯ | ನಾರಾಯಣ ॥೧॥ ಶೋಧಿಸನ್ನ ಭವದ ಕಲುಷ | ಬೋಧಿಸಯ್ಯ ಜ್ಞಾನ ಎನಗೆ | ಬಾಧಿಸುವ ಯಮನ ಬಾಧೆ | ಬಿಡಿಸು ಮಾಧವ ॥೨॥ ಹಿಂದನೇಕ ಯೋನಿಗಳಲಿ | ಬೆಂದು ಬಂದು ನೊಂದೆ ನಾನು | ಇಂದು ಭವದ ಬಂಧ ಬಿಡಿಸು | ತಂದೆ ಗೋವಿಂದ ॥೩॥ ಭ್ರಷ್ಟನೆನಿಸಬೇಡ ಕೃಷ್ಣ | ಇಷ್ಟು ಮಾತ್ರ ಬೇಡಿಕೊಂಬೆ | ಶಿಷ್ಟರೊಡನೆ ಇಷ್ಟು ಕಷ್ಟ | ಬಿಡಿಸು ಕೆಷ್ಣವೆ ॥೪॥ ಮೊದಲು ನಿನ್ನ ಪಾದ ಪೂಜೆ | ಮುದದಿ ಮಾಡುವೆನು ನಾನು | ಹೃದಯದೊಳಗೆ ಒದಗಿಸಯ್ಯ | ಮಧುಸೂದನ ॥೫॥ ಕವಿದುಕೊಂಡು ಇರುವ ಪಾಪ | ಸವೆದು ಪೋಗುವಂತೆ ಮಾಡಿ | ಜನರ ಬಾಧೆಯನ್ನೇ ಬಿಡಿಸೋ | ತ್ರಿವಿಕ್ರಮ ॥೬॥ ಕಾಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಜನಕ ನಿನ್ನ ನಾಮ ಪ್ರೇಮದಿಂದ ಪಾಲುಮಂಥ । ನೇಮ ಎನಗೆ ಪಾಲಿ
ಸಯ್ಯ । ಸ್ವಾಮಿ ವಾಮನ ॥೬॥ ಮದನನಯ್ಯ ನಿನ್ನ ಮಹಿಮೆ । ವದನ
ದಲ್ಲಿ ಇರುವಂತೆ । ಹೃದಯದಲ್ಲಿ ಸದನ ಮಾಡು ಮುದದಿ ಶ್ರೀಧರ ॥೭॥
ಹುಸಿಯನಾಡಿ ಹೊಟ್ಟೆ ಹೊರೆವ । ವಿಬೆಯದಲ್ಲಿ ರಸಿಕನೆಂದು । ಹುಸಿಗೆ
ಡಾಕದಿರಯ್ಯ । ಹೃಷಿಕೇಶನೆ ॥೮॥ ಬಿದ್ದು ಭವದನೇಕೆ ಜನುಮ । ಬದ್ಧ
ನಾಗಿ ಕಲುಷದಿಂದ । ಗೆದ್ದು ಪೋಪ ಬುದ್ಧಿ ತೋರೋ ಪದ್ಮನಾಭನೆ
॥೯॥ ಕಾಮ ಕ್ರೋಧ ಬಿಡಿಸಿ ನಿನ್ನ । ನಾಮ ಜಿಹ್ವೆಯೊಳಗೆ ನಡೆಸು ।
ಶ್ರೀ ಮಹಾನುಭಾವನಾದ । ದಾಮೋದರ ॥೧೦॥ ಪಂಜಜಾಕ್ಷೆ ನೀನು ಎನ್ನ
ಮಂಕು ಬುದ್ಧಿ ಬಿಡಿಸಿ ನಿನ್ನ । ಕಿಂಕರನ್ನ ಮಾಡಿಕೊಳ್ಳೊ । ಸಂಕರುಷ
ಣ ॥೧೨॥ ಏಸು ಜನ್ಮ ಬಂದರೇನು । ದಾಸನಲ್ಲವೇನೋ ನಾನು । ಗಾಸಿ
ಮಾಡದಿರು ಎನ್ನ । ವಾಸುದೇವನೆ ॥೧೩॥ ಬುದ್ಧಿ ಶೂನ್ಯನಾಗಿ ಎನ್ನಾ ।
ಪದ್ಮಕಾರ್ಯ ಕುಹಕ ಮನವ । ತಿದ್ದಿ ಹೃದಯ ಶುದ್ಧಿ ಮಾಡೋ । ಪ್ರದ್ಯು
ಮ್ನನೆ ॥೧೪॥ ಜನನಿ ಜನಕ ನೀನೆ ಎಂದು । ಎನುವೆನಯ್ಯಾ ದೀನಬಂಧ ।
ಎನಗೆ ಮುಕ್ತಿ ಪಾಲಿಸಿಂದು । ಅನಿರುದ್ಧನೆ ॥೧೫॥ ಹರುಷದಿಂದ ನಿನ್ನ
ನಾಮ ಸ್ಮರಿಸುವಂತೆ ಮಾಡು ಪ್ರೇಮ ಇರಿಸ್ಮನರಣದಲ್ಲಿ ಕ್ಷೇಮ ।
ಪುರುಷೋತ್ತಮ ॥೧೬॥ ಸಾಧುಸಂಗ ಕೊಟ್ಟು ನಿನ್ನ ! ಪಾದಭಜನೆ ಇತ್ತು
ಎನ್ನ । ಭೇದ ಮಾಡಿ ನೋಡದಿರು । ಅಧೋಕ್ಷಜ ॥೧೭॥ ಚಾರು ಚರಣ
ತೋರಿ ಎನಗೆ ! ಪಾರುಗಾಣಿಸಯ್ಯ ಕೊನೆಗೆ । ಭಾರ ಹಾಕಿರುವೆ ನಿನಗೆ
ನಾರಸಿಂಹನೆ ॥೧೮॥ ಸಂಚಿತಾರ್ಥ ಪಾಪಗಳು । ಕಿಂಚಿತಾನ ಪೀಡೆಗಳು ।
ಮುಂಚಿತವಾಗಿ ಕಳೆದು ಪೊರೆಯೋ । ಸ್ವಾಮಿ ಅಚ್ಯುತ ॥೧೯॥ ಜ್ಞಾನಭಕ್ತಿ
ಕೊಟ್ಟು ನಿನ್ನ । ಧ್ಯಾನದಲಿ ಇಟ್ಟು ಸದಾ । ಹೀನ ಬುದ್ಧಿ ಬಿಡಿಸು ಮುನ್ನ
ಜನಾರ್ಧನ ॥೨೦॥ ಜನಪತಮಾನುಷ್ಯಾನವಿಲ್ಲದೆ ಕುಪಥಗಾಮಿಯಾದ। ಎನ್ನ
ಕೃಪೆಯ ಮಾಡಿ ಕ್ಷಮಿಸಬೇಕು । ಉರ್ವೀರಿದ್ರನೆ ॥೨೧॥ ಮೊರೆಯ ಇಡುವೆ
ನಯ್ಯ ನಿನಗೆ ತರಧಿಶಯರ ಶುಭಮತಿಯ ಇರಿಸೊ ಭಕ್ತನೆಂದು ಪರಮ ।
ಪುರುಷ ಶ್ರೀಹರೇ ॥೨೨॥ ಪುಟ್ಟಿಸಲು ಬೇಡ ಇನ್ನು । ಪುಟ್ಟಿಸಿದಕ್ಕೆ ಪಾಲಿ
ಸನ್ನು । ಇಷ್ಟು ಬೇಡಿಕೊಂಬೆ ನಾನು ! ಶ್ರೀ ಕೃಷ್ಣನೆ ॥೨೩॥ ಸತ್ಯವಾದ
ನಾಮಗಳು । ನಿತ್ಯದಲ್ಲಿ ಪಠಿಸುವಗೆ ಆರ್ತಿಯಿಂದ । ಸಲಹುವ ಕರ್ತು

CC-O. In Public Domain. Digitized by eGangotri

ಕೇಶವ ॥೨೪॥ ಮರೆಯದಲ್ಲಿ ಹರಿಯ ನಾಮ । ಪಠಿಸಿದು ಓದಿ ಕೇಳು ವರ್ಗ । ಕರೆದು ಮುಕ್ತಿ ಕೊಡುವ ನೆಲೆಯಾದಿಕೇಶವ ॥೨೫॥

೩ ರಾಗ ಭೈರವಿ ರೂಪತಾಳ

ಈತನೀಗ ವಾಸುದೇವನು । ಲೋಕದೊಡೆಯ । ನೀತನೀಗ ವಾಸುದೇವನ್ನ ॥ಪ॥ ಈತನೀಗ ವಾಸುದೇವ ನೀ ಸಮಸ್ತಲೋಕದೊಡೆಯ । ದಾನವಗೊಲಿದು ತೇರನೇರಿ ತೇಜಿ ಪಿಡಿದು ನಡೆಸಿದಾತ ॥ಅ॥ ಮನಜೆಯೊಳ್ದು ನಣ್ಣನಯ್ಯನ ಪಿತನ ಮುಂದೆ ಕಾರಣೇಂದ್ರ । ನನುಜೆಯಾಳಿದನವನ ಶಿರವ ಕತ್ತರಿಸುತೆ । ಅನುಜೆಯಾಳಿದನವನ ಬೆಂಕಿ ಮುಟ್ಟದಂತೆ ಕಾಯ್ದ ರುಕ್ಮ । ನನುಜೆಯಾಳಿದನವನ ಮೂರ್ತಿಯನ್ನು ನೋಡಿರೊ ॥೧॥ ನರನ ಸುತನ ರಣ್ಯದಲ್ಲಿ ಗಿರಿಯೊಳ್ಮಂತು ತನ್ನ ರೋಷದಿ । ಶರಗಳನ್ನು ತೀಟುತಿಪ್ಪನ ಯೋಚಿಸಿ । ಭರದಲವನ ಕಳೆದು ಕುರಹತೋರಿ ಪತ್ರವನ್ನು ಹಾರಿಸಿದವನ । ಶಿರವನ್ನು ಛೇದಿಸಿದ ದೇವ ಕಾಣಿರೋ॥೨॥ ಸೃಷ್ಟಿಕರ್ತನಿಗೆ ಮಗನಾದವನಿಗಿಪ್ಪ ಭೂಷಣ ಆದನವಾದನ । ಜೇಷ್ಪಪುತ್ರಗೆ ಪೈರಿ ತಿಲ್ಲಡೆಯ ಛೇದಿಸೆಂದು ಬೋಧಿಸಿ । ಕಷ್ಟವನ್ನು ಕಳೆದು ಭಕ್ತರಿಷ್ಟರನ್ನು ಕಾದು ಉ । ತ್ಕೃಷ್ಟ ಮಹಿಮನಾದ ದೇವ ಕಾಣಿರೊ॥೩॥ ಕ್ರೂರನಾದ ಪಣಿಪಬಾಣ ತರಣಿಜನು ನಿರೀಕ್ಷಿಸ್ಯಾಗ ವೀರನೆಚ್ಚಯೆಸುಗೆ ಐಶ್ಪದನ್ನು ಈಕ್ಷಿಸಿ । ಧಾರಣಿಯ ಗದದೊಳ್ಳಾಕೆ ಚರಣಭಜಕ ನರನ ಕಾಯ್ದ । ಭಾರಕರ್ತನಾದ ದೇವ ನೀತ ನೋಡಿರೊ ॥೪॥ ವ್ಯೋಮಕೇಶನಿಪ್ಪ ದೆಸೆಯ ಆ ಮಹಾಮಹಿಮೆಯುಳ್ಳ । ಸಾಮಜವನೇರಿ ಬರುವ ಶಕ್ತಿಯನ್ನೀಕ್ಷಿಸಿ । ಪ್ರೇಮದಿಂದ ಉರವನೊಡ್ಡಿ ಡಿಂಗರಿಕನ ಕಾಯ್ದ ಸಾರ್ವ । ಭೌಮ ಬಡವಾದಿ ಕೇಶವನು ನೋಡಿರೋ ॥೫॥

೪ ರಾಗ ಪಂತುವರಾವಳಿ ತಾಳ

ಈತನೇನೆ ನಿನ್ನ ಮಗನು ॥ಪ॥ ಸೀತಾಪತಿ ರಘುನಾಥನೆಂಬಾತನು ॥ತ॥ ವ್ಯಾಸನ ಜನನಿಯ ವಾಸನೆ ತಾಳ್ದನು । ದೇಶದೊಳಗೆ ಬಲು ಹೆಸರುಳ್ಳವಗನೇ । ನಾಸ್ಪದೊಳ್ಗೋರ್ವನ ಪೆತ್ತು ಮುರಿದು ಮು । ನೀಶ್ವರ ಶಾಪವ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಿಡಿದು ಕೊಂದಾತನು ॥೧॥ ಅನಿವಾಹನಪಿತನ ತಾಯುನಳಿದೋನು | ಭಾನುಸುತಗೆ ಶಾಪವಿತ್ತವನು | ಕಾನನ ಜನನೀಯ ಕೊಂಮ ಪ್ರೀಡುದಲಿ ನೀ ಧಾನಿಶರಧಿಯನ ಮಾಡಿನಾತನು ॥೨॥ ಪೂಗ್ರಾವ ಮುರಿದು ವಾಜಿಯ ನೇರಿದಾತನು | ಸಾಗ್ರದಿಂದೆಳೆಯ ಭಾಗ್ಯವ ಹಿಂಗಿಸಿದ | ಯೋಗ್ಯ ದಿಂದಾ ಬಳಪತಿತನವನಿಗೆ | ಭಾಗ್ಯವಿತ್ತ ಕಾಗಿನೆಲೆಯಾದಿ ಕೇಶವ ॥೩॥

೫ ರಾಗ ಕಾಂಬೋದಿ ಝಂಪತಾಳ

ಕಾಯೊ ಕರುಣಾಕರನೆ ಕಡುಪಾಗಿ ನಾನು / ನ್ಯಾಯವೆಂಬೊದು ಎನ್ನೊಳಿಲ್ಲನಷ್ಟಿಲ್ಲ ॥ಪ॥ ಎಣ್ಣೆ ಕೊಪ್ಪರಿಗೆಯೊಳ್ಬಿದ್ದು ಸ್ತುತಿಸಿದವನಲ್ಲ | ಚಿನ್ನ ಕಶಿಪುಬಾಧೆಗೊಳಗಾದವನಲ್ಲ | ಬಣ್ಣನಟ್ಟದವಿಯಲ್ಲಿ ತಪಸ್ಸು ಮಾಡಿದವದಲ್ಲ | ಹೆಣ್ಣಿನೊಳು ಸೇರಿ ನಿನ್ನೊದರಿದವನಲ್ಲ ॥೧॥ ಒಲಿದು ದಾನವ ನಿತ್ತ ವೈಕುಲದವನಲ್ಲ | ಬಲುಭಕುತಿಯ ದಾಸಿಪುತ್ರ ನಾನಲ್ಲ | ಕಲಹದಲ್ಲಿ ಪಣೆಗೆ ಬಾಣವ ನಡಿಸಿದವನಲ್ಲ ಕಳಕಳದಿ ಕರಿವ ಪಾಂಚಾಲಿ ನಾನಲ್ಲ ॥೨॥ ಉರಗರಾಜನ ತೆರದಿ ಹಾಸಿಗಾದಿವನಲ್ಲ | ಗರುಡನಂದದಿ ಪೊತ್ತು ತಿರುಗಿನವನಲ್ಲ ಸಿರಿಧವನೆ ಕಾಗಿನೆಲೆಯಾದಿ ಕೇಶವ ನಿನ್ನ ಚರಣಡಿಂಗರ ವಾಸ ಮಾತ್ರ ನಾನಹುದೆಂದು ॥೩॥

೬ ರಾಗ ಕಾಮೋದಿ ಝಂಪತಾಳ

ಕಾವನಯ್ಯನ ಕಳಹು ರಮಣೆ ॥ಪ॥ ಕೋವಿಧರ ಪಡೆದ ಬುಡದಾರಿ ಕೇಶವನ ॥ಅ॥ ಚಂದ್ರವಂಶಜರಾಯನನುಜ ಸುಖನಾದವನ | ಚಂದ್ರವೈರಿಯ ಮೇಲೆ ಪವಳಿಸಿದವನ | ಚಂದ್ರದುನ ಸೋದರಿಯ ಕೈಪಿಡಿದಂಥವನ | ಚಂದ್ರಧಾಮನ ನೇನೆಗೆ ಕಳುಹೆ ಕಮಲಾಕ್ಷೆ ॥೧॥ ಕಮಲನಾಭನ ಕಮಲಸಖಕೋಟಿತೇಜನ | ಕಮಲ ಕೊರಕದಿ ಜನಿಸಿದಯ್ಯನ ಕಮಲವನ್ನು ಕರದಲ್ಲಿ ಪಿಡಿದಿಹ ಬೇಗದಲಿ ! ಕಮಲವದನನ ಮನೆಗೆ ಕಳುಹೆ ಕಮಲಾಕ್ಷೆ ॥೨॥ ಭವಭವದಿ ಬಂಧಿಪ ಅಸುರರನ್ನು ಸೀಳಿದನು ! ಲೀಲೆ

Sri Vijaya Datta Book Centre, Sringeri

CC-O. In Public Domain. Digitized by eGangotri

ಯಿಂದಲಿ ಭಕ್ತರನ್ನು ಸಲಹುತಿಹನ | ನೀಲಮೇಘ ಶ್ಯಾಮ ಭಾಗ್ಯಪ್ರದಲ್ಲಿ ನಿಂದ ಶ್ರೀ ಲತಾಂಗಿ ರಮಣ ಆದಿಕೇಶವನ ॥೩॥

೭ ರಾಗ ಶಂಕರಾಭರಣ ಆಟತಾಳ

ಕೇಶವ ಎನ್ನಿರೋ | ಕ್ಲೇಶನಾಶನನ | ಕೇಶವ ಎನ್ನಿರೊ | ತನ್ನ ಆಸೆ ಪಟ್ಟವನಿಗೆ ಅಧಿಕ ಫಲವೀಯನ ! ಕೇಶವ ಎನ್ನಿರೊ ॥೫॥ ಸತಿಯ ತಮ್ಮನ ಸುತನೊಳು ಸೋದರನಾದನ | ಕೇಶವ ಎನ್ನಿರೊ | ಮತಿವಂತ ಮಾನವ ಮಗಳ ತಂದಾತನ ! ಕೇಶವ ಎನ್ನಿರೊ | ಮತಪಿಡಿದವನ ಮಾತೆಯ ಮೊಮ್ಮಗನ ಕೊಂದನ| ಕೇಶವ ಎನ್ನಿರೊ| ಕ್ಷಿತಿಯುತನಾಗಿ ಕರಿಯಕಾಯ್ದಾತನ | ಕೇಶವ ಎನ್ನಿರೋ ॥೧॥ ದಶಮುಖನರಸಿಯ ಪೆಸರ ಶಿರವ ಗೆದ್ದನ ಕೇಶವ ಎನ್ನಿರೊ |ಅಸದಳನಿಷ ರನ್ನೆರೊಳಗೂಡಿದಾತನ | ಕೇಶವ ಎನ್ನಿರೊ| ಕುಸುಮ ಕೋದಂಡ ಗಂಡರ ಗಂಡನಾದನ | ಕೇಶವ ಎನ್ನಿರೊ | ಎಸೆವ ಬಾಣಕೆ ತನ್ನ ಎದೆಯಾಂತು ನಿಂದನ | ಕೇಶವ ಎನ್ನಿರೊ ॥೨॥ ದಾಸರ ಹೃದಯದೊಳಗೆ ನೆಲಸಿಪ್ಪನ | ಕೇಶವ ಎನ್ನಿರೊ | ದೇಶವರಿಕೆಯಲ್ಲಿ ನಯ ಉಂಟಾಪವನ | ಕೇಶವ ಎನ್ನಿರೋ | ಮೋಸದಿಂ ಮುಂದಲೆ ಪಿಡಿದು ಭಂಜಿಸಿದವನ ಕೇಶವ ಎನ್ನಿರೊ | ನಮ್ಮ ದೇಶಾಧಿಪತಿ ಕಾಗಿ ನೆಲೆಯಾದಿ ಕೇಶವನ | ಕೇಳುವ ಬನ್ನಿರೊ ॥೩॥

೮ ರಾಗ ಧನ್ಯಾಸಿ ಆಟತಾಳ

ಕೇಶವನೊಲುಮೆಯು ಆಗುವ ತನಕ್ಕಾರಿ | ದಾಸರೊಳಿರುತಿರುವ ಜೀವ ಮನುಜ ॥೫॥ ಕ್ಲೇಶಪಾಶಂಗಳ ಹರಿದು ವಿಲಾಸದಿ | ಶ್ರೀಶನ ನುತಿಗಳ ಪೊಗಳುತ ಮನದೊಳು ॥೮॥ ಮೋಸದಿ ಜೀವರ ಗಾಸಿ ಮಾಡಿದ ಪಾವ | ಕಾತಿಗೆ ಹೋದರೆ ಹೋದೀತೆ | ಶ್ರೀಶನ ಭಕ್ತರ ದೋಷಿಸಿದಾ ಫಲ | ಕಾಸು ಕೊಟ್ಟರೆ ಬಿಟ್ಟೀತೆ | ಭಾಷೆಯ ಕೊಟ್ಟು ನಿರಾಶೆ ಮಾಡಿದ ಫಲ | ಕ್ಲೇಶವ ಗೊಳಿಸದೆ ಇದ್ದೀತೆ | ಭೂಸುರರ ಸ್ವವಹಾಸ ಮಾಡಿದ ಫಲ | ಏಸೇಸು ಜನುಮಕು ಬಿಟ್ಟೀತೆ ॥೧॥ ಜೀವನ ವನದೊಳು ನಾನಾ ದ್ರವ್ಯವಿರೆ | ದಾನ ಧರ್ಮಕೆ ಮನಸಾದೀತೆ | ಹೀನ ಮನುಜನಿಗೆ ಜ್ಞಾನವ ಬೋಧಿ |

CC-O. In Public Domain. Digitized by eGangotri

ಹೀನ ವಿಷಯವೆಳಿದ್ಹೋದೀತೆ | ಮಾನಿನಿ ಮನಸು ನಿಧಾನವಿರದಿರೆ | ಮಾನಾಭಿಮಾನಗಳುಳದೀತೆ| ಭಾನುವಿಕಾಸನ ಭಜನೆಯ ಮಾಡದೆ|ಹೀನಗೆ ಮುಕುತಿಯು ದೊರಕೀತೇ ॥೨॥ ಸತ್ಕ ಧರ್ಮಗಳ ನಿತ್ಯವು ಬೋಧಿಸೆ | ತೊತ್ತಿನ ಮನಸಿಗೆ ಸೋಗಸೀತೆ | ತತ್ವದ ಅರ್ಥ ವಿಚಿತ್ರದಿ ಪೇಳಲು | ಕತೆಯ ಚಿತ್ಕಕೆ ತಿಳಿದೀತೆ | ಪುತ್ಥಳಿ ಬೊಂಬೆಯ ಚಿತ್ರದಿ ಜರೆದೀತೆ | ಮುತ್ತನು ಕೊಟ್ಟರೆ ನುಡಿದೀತೆ | ಕಸ್ತೂರಿ ತಿಲಕನನೊತ್ತಿ ಪಣೆಯೊಳಡೆ | ಆರ್ತಿಯು ಬೀರದೆ ಇದ್ದೀತೆ ॥೩॥ ನ್ಯಾಯವ ಬಿಟ್ಟವನ್ಯಾಯವ | ಪೇಳುವ | ನಾಯಿಗೆ ನರಕವು ತಪ್ಪೀತೆ | ತಾಯಿ ತಂದೆಗಳನು ಬಲು ನೋಯಿಸಿದ ನಾಯಿಗೆ ಮುಕುತಿಯುತಿಯು ದೊರಕೀತೆ | ಬಾಯಿ ಕೊಬ್ಬಿ ಬೈಯುವ ಮನುಜಗೆ ಗಾಯವು ಆಗದೆ ಬಿಟ್ಟೀತೆ | ಮಾಯವಾದಗಳ ಬೋಧಿಸ ಮನುಜಗೆ ಹೇಯ ನರಕವು ತಪ್ಪೀತೆ ॥೪॥ ಸಾಧು ಸಜ್ಜನರ ಬಂಧಿಸುತಲಿ ಬಲು ಬೋದಿಸಗೆ ದೋಷವು ತಪ್ಪೀತೆ | ಬಾಧಿಸಿ ಬಡವರ ಆರ್ಥವನೊಯ್ವಗೆ | ವ್ಯಾಧಿಯು ಕಾಡದೆ ಬಿಟ್ಟೀತೆ | ಮೋನಿನಿಯೊಳು ಬಹು ಕ್ಷುದ್ರವ ಕಲಿತರೆ | ಮೋದವೆಂದಿಗೂ ಆದೀತೆ | ಓದಿ ಕುತರ್ಕವ ನಾದಿಪಿ ಸಭೆಯಲಿ | ಮೋದಿಸುವನಗೆ ಸುಖವಾದೀತೆ ॥೫॥ ಅಂಗಜ ವಿಷಯ ಗಳನು ತೊರೆದಾತನೆ | ಅಂಗನೆಯರ ರತಿ ಸೊಗಸೀತೆ | ಸಂಗದುಃಖ ಗಳ ಹಿಂಗಿದ ಮನುಜರ | ಶೃಂಗಾರದ ಬಗೆ ಸೊಗಸೀತೆ | ಇಂಗಿತವರಿತ ನಿಸ್ಸಂಗಿ ಶರೀರವ ಜಾಂಗಿಯಾಗದೆ ತಾನಿದ್ದೀತೆ | ಮಂಗಳಮಹಿಮನ ಆಂಘ್ರಿಯಣದ | ತಾಮಗಂಗೆ ಮುಕುತಿಯು ದೊರಕೀತೇ ॥೬॥ ಕರುಣಾ ಮೃತದಾಭರವಣಿವ ಧರಿಸಿನ ಪರಮಗೆ ಸಿರಿಯು ತಪ್ಪೀತೆ | ಕರಣಪಾಶಮ ರವಸೆ ತೊರೆದಾತಗೆ | ಶರಣರ ಕರುಣವು ತಪ್ಪೀತೆ | ಅರಿತು ಶಾಸ್ತ್ರವನಾ ಚರಿಪ ಯೋಗಿಗೆ | ಗುರು ಉಪದೇಶವು ತಪ್ಪೀತೆ | ವರವೇಲಾಪುರದಾದಿ ಕೇಶವನ | ಸ್ಮರಿಸುವನಿಗೆ ಮೋಕ್ಷ ತಪ್ಪೀತೆ ॥೭॥

೯ ರಾಗ ಸಾವೇರಿ ಏಕತಾಳ

ಗೋವಿಂದ ಗೋವಿಂದ ಎನ್ನಲರಿಯನೆ | ವೃಥಾ | ನೋವಿಂದ ಭಂಗವು ಪಡುವನುಚಿತವೆ ಗೋವಿಂದ ॥ಪ॥ ಕ್ಷೀಣ ಶಾಸ್ತ್ರರ್ಥವನು ಪರಿಗ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಪ್ಪಿ ನಿಖಿಲ ಕುರಿ | ಕೋಣಗಳ ತಲೆಯ ಚಂಡನು ಕುಟ್ಟಿಸಿ | ಪ್ರಾಣ ಹತ್ಯವ ಮಾಳ್ಪದಾದ ಸತ್ಕರ್ಮವೋ | ನಾರಾಯಣನ ನಾಮಸ್ಮರಣೆಯು ಕೇಳು ಮನವೆ ॥೧॥ ಖಂಡವನು ಕೊಯ್ದು ಕೊಡಬ್ಯೆಡ ದಳ್ಳುರಿಯಲ್ಲಿ | ಕುಂಡನನು ಹೊಕ್ಕು ಹೊರಡುವುದುಚಿತವೆ | ಭಂಡದಂಡದಿ ಬತ್ತಲೆ ಬರುವದಾವಾಟ | ಪುಂಡರೀಕಾಯತಾಕ್ಷನ ನೆನೆ ಕಂಡ್ಯ ಮನವೆ ॥೨॥ ಕುಟ್ಟಿಕೊಳ್ಳದಿರಿ ಜಾಟೆ ಗುಂಡಿನಲ್ಲಿ ಶಸ್ತ್ರವನು | ಚಿಟ್ಟಕೊಳ್ಳದಿರಿ ಬಿನ್ನಿನಲಿ ಸಿಡಿಯನು | ಕಟ್ಟ ತೂಗಿಕೊಳ್ಳದಿರಿ ಕರತೆಳದಂತೆ | ಗುಟ್ಟಿನಲಿ ಗೋಪಾಲಕನ ಸ್ಮರಿಸು ಮರಳಿ ॥೩॥ ತೊಗಲ ಬಿಲ್ಲಿಗಳ ಕೊರಳಲ್ಲಿ ಕಟ್ಟಿಕೊಂಡು ಹಗಲಿರುಳು ಅನ್ನಪಾನಕೆ ಹೋಗದೆ | ಮೃಗಮೈರಿಯಂತೆ ಕಪಕೆಲವದಾವಾಟ | ಜಗದಾಧಿಪತಿಯ ನಾಮ ಸ್ಮರಿಸು ಮಗಳೆ ॥೪॥ ಉತ್ತಮಥ ಸೂರಿಯ ನೀಂಟವರೆಲಾ ಹರಿಮದೋ | ನೃತ್ಯರಾಗ ಶಬ್ದಗಳ ನುಡಿವರೆ | ಸತ್ಯ ಹಣವೆನುತ ಬಿದ್ದಿಹ ದಾವನೀತ ಪುರು | ಷೋತ್ತಮನ ನಾಮಸ್ಮರಣೆಯ ಕೇಳು ಮನವೆ ॥೫॥ ಮೇದೊಕ್ಕ ಪೂಜೆಯಲಿ ತೃಪ್ತಿಪಡಿಸಿದರೆ | ನಿಮಗೇನಪರಿಂದ ಫಲವಾಪುದಯ್ಯ | ಶ್ರೀನಾಥನು ಪೊಕ್ಕ ಹರಿಣದಂತೆ ಕೆಡಬೆಡ ಮಧು | ಸೂದನನ ನಾಮಸ್ಮರಣೆಯು ಕೇಳು ಮರುಳೆ ॥೬॥ ನಿಂದಾಪವಾದ ಘಟಿಸುವುದೈಸೆ ಇದರಿಂದ ಮುಂದೆ ಮುಕ್ತಿಯು ನಿಮಗೆ ಸಾಧ್ಯವಹುದೆ! ತಂದೆಮ್ಮ ಕಾಗಿನೆಲೆಯಾದಿ ಕೇಶವ ನಾಮವಿ | ದೊಂದು ವೈಕುಂಠ ತಪವನ್ಯೆದಿಪುದು ॥೭॥

೧೦ ರಾಗ ನಾದನಾಮಕ್ರಿಯೆ ಛಾಪುತಾಳ

ಗೋವಿಂದ ಸಲಹೆನ್ನನು ಸದಾನಂದ ॥ಸ॥ ಗೋವಿಂದ ಸಲಹೆನ್ನ ಕುಮುದಲೋಚನ ನಿನ್ನ | ಸೇವಕರಡಿಯ ಸೇವಕನಯ್ಯ ಗೋವಿಂದ ॥ಅ॥ ತಮನ ಸಂಹರಿಸಿ ವೇದವ ತಂದೆ ಗೋವಿಂದ | ಅಮರರಿಗಮೃತಪಾನವ ನಿತ್ತೆ ಗೋವಿಂದ | ರವ್ಯಣಿಯ ತಂದ ವರಹರೂಪಿ ಗೋವಿಂದ | ಭೂಮಿಸಿ ಕುಂಭಿಸಿಳುದ್ಧರಿಪಿದೆ ಗೋವಿಂದ | ಕ್ಷತ್ರಿಯನಳಿದ ಬ್ರಹ್ಮಚಾರಿಯೆ ಗೋವಿಂದ! ಸಮರದೊಳಖಿಳ ರಾಯರಕೊಂದೆ ಗೋವಿಂದ! ಕಮಲಾಕ್ಷ ಕಡಲ ಕಟ್ಟಿದ ದಿಟ್ಟ ಗೋವಿಂದ | ಮ್ಮಮತೆಯೊಳಿಕೆಯ ಗೋಮಳ

CC-O. In Public Domain. Digitized by eGangotri
Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಯೆ೦ದ್ದಿ ಗೋವಿ೦ದ | ರಮಣಿಯರ್ಗೊಲಿದು ಬತ್ತಲೆ ನಿ೦ದೆ ಗೋವಿ೦ದ | ವಿಮಲ ಕೀರಕಪನೇರಿ ನಡೆಸಿದ ಗೋವಿ೦ದ | ನಮಿಪರಿಗೊಲಿವೆ ಗೋವಿ೦ದ | ನಿ೦ದಿಸರಿಗೆ | ಶಮನನ೦ತಿಪ್ಪೆ ಗೋವಿ೦ದ | ಎಲ್ಲೂರಳಿಪ್ಪ ಅಮಿತಮಹಿಮ ಗೆ೦ವಿ೦ನ | ಇ೦ಗಡಲೊಳು ಗಮನನಿರ್ಜಿತ ಗೋವಿ೦ದ | ಅಚ್ಯುತ ಸರ್ವೋ ತ್ತಮನೆ ಚಿನ್ಮಯಗೋವಿ೦ದ | ನಿಶ್ಚಲಭಕ್ತಿ | ಕ್ರಮವ ಬೋಧಿಸೊ ಗೋವಿ೦ದ | ಪಾಪವನೆಲ್ಲ | ಶಮನಗೊಳಿಪ ಗೋವಿ೦ದ | ನಮೋ ಲಕ್ಷ್ಮೀ | ರಮಣ ದಶಾವತಾರ ತಾಳಿದ ಹರಿಯೆ ॥೧॥ ಮನವೆನ್ನ ವಾತು ಕೇಳದು ಕಾಣೋ ಗೋವಿ೦ದ | ಮನವ ಗೆಲುವ ಬಗೆಯೆಗಗಿಲ್ಲ ಗೋವಿ೦ದ | ತನುವನ೦ತಹ ದೇಹ ಸ್ಥಿರವಲ್ಲ ಗೋವಿ೦ದ | ಬಿನುಗು ಬುದ್ಧಿಗಳನು ಬಿಡಿಸಯ್ಯ ಗೋವಿ೦ದ | ನೆನಹು ನಿನ್ನೊಳಗಿಟ್ಟು ನಡೆಸಯ್ಯ ಗೋವಿ೦ದ | ನೆನೆವ ಪಾಪ೦ ಮನದೊಳಗಿರ್ಪ ಗೋವಿ೦ದ | ಪನ ಜಲೊಡನ ನಾ ನಿನ್ನವನಯ್ಯ ಗೋವಿ೦ದ | ಘನಮಹಿಮನೆ ನಿನ್ನ ಮರೆಹೊಕ್ಕೆ ಗೋವಿ೦ದ | ಮುನಿಗಳ ಮನದೊಳು ಮಿನುಗುವ ಗೋವಿ೦ದ | ನಿನಗಲ್ಲದಪಕೀರ್ತಿ ಎನಗೇನೊ ಗೋವಿ೦ದ | ಜನನರಹಿತ ಗೋವಿ೦ದ ನೆನ್ನಡಿಗಳ ! ನೆನಹೂ ಅಡೋ ಗೋವಿ೦ದ | ದುರ್ವಿಷಯವಾ | ಸನೆಯ ಬಿಡಿಸೊ ಗೋವಿ೦ದ | ಕುತ್ಸಿಕ ಕೆಟ್ಟ | ತನವ ಬಿಡಿಸೊ ಗೋವಿ೦ದ | ಸದ್ಗುಣವೆ೦ಬ | ಧನವ ತು೦ಬಿಸೋ ಗೋವಿ೦ದ | ಇದಕ್ಕೆ ಬಡ | ತನವೆ ನಿನಗೆ ಗೋವಿ೦ದ | ಸದಾ ನಿನ್ನ ಘನಸ್ಮರಣೆ ಕೊಡು ಗೋವಿ೦ದ | ಸದಾ ನ೦ದ | ಸನಕ ಸನ೦ದನಾರ್ಚಿತ ಪಾದ ಹರಿಯೆ ॥೨॥ ನರಜೊ೦ಬಿಗಳ ಪರಾಡಿ ಕುಣಿಸುವೆ ಗೋವಿ೦ದ | ನರರ ನೋಡಿ ನೋಡಿ ನಗುತಿರ್ಪೆ ಗೋವಿ೦ದ | ಅವದೆನೆ೦ಬರಿಗತ್ವಭೋರದೊ ಗೋವಿ೦ದ | ಅರಿಯದ೦ತ ಬಿಸೆಳಗಿರ್ಪೆ ಗೋವಿ೦ದ | ಅರಿಯಾಡ೦ಬರಗಳಿಗಳೂಡದ ಗೋವಿ೦ದ ಪರಮಪಾವನೆ೦ಬ ಬಿರುದು ! ಳ್ಳ ಗೋವಿ೦ದ | ಪರಮ ಪುರುಷ ಪುರು ಷೋತ್ತಮ ಗೋವಿ೦ದ | ಪರಬ್ರಹ್ಮ ಪರಮಪರಾತ್ಪರ ಗೋವಿ೦ದ | ಮರೆ ಹೊಕ್ಕ ಭಕ್ತರ ಸಲಹುವ ಗೋವಿ೦ದ | ಕರಿರಾಜ ಕಲೆಯದೊದಗಿ ಬ೦ದೆ ಗೋವಿ೦ದ | ಗರುಡಗಮನ ಗೋವಿ೦ದ | ಕಿನ್ನರಸಿದ ಗರುಡನನ್ನುತ ಗೋವಿ೦ದ | ಅವನಿವನಿತ | ಕರುಣಾಸಾಗರ ಗೋವಿ೦ದ | ಅರಿಯದ೦ಥ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರನು ಜ್ಯೋತಿಯ ಗೋವಿಂದ ಗಂಗೆಯಪತ್ತಿ ಚರಣ ನಿರ್ಮಲ ಗೋವಿಂದ ತೆತ್ತೀಸಕೋಟಿ ಸುರರ ಪೊರೆವ ಗೋವಿಂದ ! ಶ್ರೀ ವೈಕುಂಠ ಪುರದೊಳಗಿಹ ಗೋವಿಂದ | ಅಚ್ಯುತಾನಂದ ತಿರುಪತಿ ನೆಲೆಯಾಣೆ ಕೇಶವ ಹರಿಯೆ ॥೩॥

೧೧ ರಾಗ ಪೂರ್ವಿ ಆಟತಾಳ

ಗೋವಿಂದಾ ಹರಿ ಗೋವಿಂದಾ ॥ಪ॥ ಗೋವಿಂದಕೇಶವ ಕೃಷ್ಣ ಜನಾರ್ಧನ | ಗೋವಿಂದಾ ॥ಅ॥ ಮತ್ಸಾವತಾರದೊಳಾಡಿದರೆ ॥ ಮಂ|ದ | ರಾಜಲವನು ಬೊನ್ನೂಳ್ ತಾಳಿದನೆ | ಸ್ವಚ್ಛಸೂಕರನಾಗಿ ಬಾಳಿದಡೆ| ಮದಹೆಚ್ಚಿ ಹಿರಣ್ಯನ ಸೀಳಿದನೆ | ಗೋವಿಂದಾ ॥೧॥ ಕುಂಭಿನಿದಾನವ ಬೇಡಿದನೆ ಕ್ಷತ್ರಿ | ಯೆಂಬವರನು ಹತ ಮಾಡಿದನೆ | ಲವ| ಣಾಂಬುಧಿಗೆ ಶರ ಹೂಡಿದನೆ ಳನುಲಾಂಬಳ | ಗೊಲ್ಲರೊಳಾಡಿದನೆ | ಗೋವಿಂದ ॥೨॥ ವಸುದೇವನುದಿ ಪುಟ್ಟಿದನೆ | ಪಲ್| ವಸೆವ ದನುಜರೊಡಗುಟ್ಟಿದನೆ | ನಿರೊ| ಳಸೆವ ಕಾಳಿಂಗನ ಮೆಟ್ಟಿದನೆ | ಬಾ| ಧಿಸುವರ ಯಮುಪುರ ಕಟ್ಟಿದನೆ | ಗೋವಿಂದ ॥೩॥ ಪೂತನೆಯಳ ಮೈಯು ಸೋಕಿದನೆ | ಮಹಾ|ಘಾತಳ ಮೊಹೆಯಂದು ತೇಗಿದನೆ ಘಾತಕೆಯವಳತ್ತ ನೂಕಿದನು ಗೋಪ | ವ್ರಾತಗೋವ್ಗಳನ್ನೆಲ್ಲ ಸಾಕೆ ಹಯುವೇರಿ ಮೆರೆದವನೆ | ಬಡ | ದಾದಕೇಶವ ಭಕ್ತಿಗೊಲಿದನೆ ಗೋವಿಂದಾ ॥೪॥

೧೨ ರಾಗ ದೇಶಿ ಛಾಪುತಾಳ

ದೇವಿ ನಮ್ಮ ದ್ಯಾವರು ಬಂದರು ಬನ್ನಿರೆ ನೋಡಿ ಬನ್ನಿರೆ-| ಬನ್ನಿರೆ ನೋಡಬನ್ನಿರೆ ನೋಡಬನ್ನಿರೆ ನೋಡಬನ್ನಿರೆ ॥ಪ॥ ಕೆಂಗೆಣ್ಣ ಮೀನನಾಗಿ ನಮರಂಗ ! ಗುಂಗಾಡಿ ಸೋಮನ ಕೊಂದಾನಾ ಗುಂಗಾಡಿ ಸೋಮನಕೊಂದು ವೇದವ | ಭಂಗಾರದೊಡಲನಿಗಿತಾನಾ ॥೧॥ ದೊಡ್ಡ ಮಡುವಿನೊಳಗೆ | ನಮರಂಗ | ಗುಜ್ಜವ ಹೊತ್ತುಕೊಂಡು ನಿಂತಾನಾ ಗುಡ್ಡವ ಹೊತ್ತುಕೊಂಡು ನಿಂತ ಸುರರನು | ದೊಡ್ಡವರನ್ನ ಮಾಡಾನಾ ॥೨॥ ಚಿನ್ನ ಕಾಡಿನ ಹಂದಿಯೊಗಿ | ನಮರಂಗ | ಜಿನ್ನರ ಕಣ್ಣನ ಕೊಂದಾನಾ | ಚಿನ್ನದ ಕಣ್ಣನ ಕೊಂದು ಭೂಮಿಯ ದನಜಸಂಭ

Sri Vidyaharathi Book Centre, Sringeri

CC-O. In Public Domain. Digitized by eGangotri

ವಗಿತ್ತನ್ಯಾ ಜೊಟ್ಟಿಯು ಕರುಳ ಬಗಿದು | ನವುರಂಗ | ಪುಟ್ಟಿಗೆ ವರವ ಕೊಟ್ಟಾನ್ಯಾ ॥೪॥ ಹುಡುಗ ಹಾರುವನಾಗಿ | ನವುರಂಗ ಬೆಡಗಿನ ಮುಗಿಲಿಗೆ ಬೆಳೆದು ಬಲಿಯನ್ನು | ಅಡಿಯಿಂದ ಪಾತಾಳಕೊತ್ತಾನ್ಯಾ ॥೫॥ ತಾಯುವಾತನು ಕೇಳಿ | ನಾಸಿರ ತೋಳಿನ | ಅವಿನ ಅಳ್ಳನ ಕೊಂದಾನ್ಯಾ ಅವಿನ ಕಳ್ಳನ ಕೊಂದು ಭೂಮಿಯು ಅವನಿಸುರರಿಗೆ ಇತ್ತಾನ್ಯಾ. ॥೬॥ ಪಿಂಗಳ ಕಣ್ಣಿನ ಕೊಂಗಗಳ ಕೂಡಿ | ಭಂಗನಿ ಲಂಕೆಗೆ ಪೋದಾನ್ಯಾ ॥೭॥ ಕರಿಯ ಹೊಳೆಯಲ್ಲಿ ತುರುಗಳಿ ಕಾಯುತ್ತ | ಉರಗನ ಮಾಡುವ ಧುಮುಕಿನ್ಯಾ ಉರಗಳ ಹೆಡೆ ಮೇಲೆ ಹಾಯಾರಿ ಕುಣಿವಾಗ ಯಾರ್ಯಾರಿಗೇನೇನು ಇತ್ತಾನ್ಯಾ ॥೮॥ ಬಿಂಕ ಗೋವಳನಾಗಿ ನವು ರಂಗ ಡೊಂಕಾದ ಮುದುಕೆಯ ಕೂಡ್ಯಾನ್ಯಾ ಡೊಂಕಾದ ಮುದುಕೆಯ ಕೂಡಿ ಮಾನವ ಬಿಂಕವ ಮುರಿದು ಕುಣಿದಾನ್ಯಾ ॥೯॥ ಭಂಡ ನಂದದಿ ಕುಂಡೆಯ ಬಿಟ್ಟುಕೊಂಡು | ಕಂಡಕಂಡಲ್ಲಿ ತಿರುಗ್ಯಾನ್ಯಾ | ಕಂಡಕಂಡಲ್ಲಿಗೆ ತಿರುಗಿ ತ್ರಿಪುರ | ಹೆಂಡಿರನ್ನೆಲ್ಲ ಕೆಡಿಸ್ಯಾನ್ಯಾ ॥೧೦॥ ಜೆಲುವೆ ಹೆಂಡತಿ ಕುದುರೆಯ ಮಾಡಿ | ಒಳ್ಳೆ ರಾವುದಾನ್ಯಾ ಒಳ್ಳೆ ರಾವು ತನಾಗಿ ಮುಸಲರ | ಡೊಳ್ಳು ಹೆ ಟ್ಟಿಯ ಮೇಲೆ ಒದ್ದಾನ್ಯಾ ॥೧೧॥ ಡೊಳ್ಳಿನ ಮ್ಯಾಲ್ ಕೈ ಬರಮಪ್ಪ ಹಾಕ್ಯಾನು | ತಾಳವ ಶಿವನಪ್ಪ ತಟ್ಟಾನ್ಯಾ | ಒಳೊಳ್ಳೆ ಪದಗಳು ಹನುಮಪ್ಪ ಹಾಡ್ಯಾನು | ಜೆಲುವ ಕನಕಪ್ಪ ಕುಣಿದಾನ್ಯಾ ॥೧೨॥

೧೩ ರಾಗ ಸಾವೇರಿ ಆಟತಾಳ

ದೇಶಾಧಿಪತಿ ನರಹರಿಯೆ ನಿನ್ನ ಪಾದ ದಾದರದಾಸನೆಂದೆನಿಸಬೇಕೆನ್ನ ॥ಪ॥ ರಜತನೋಗುಣ ಶ್ರುವತನಿಕ ಮೂಲಾಂತರದಿಂ | ಯ್ಯಜಮಾನತನದ ಹುಂಕಾರವನ್ಹೊಲ್ಲೆ | ಭುಜಚಕ್ರಧರಿಸಿ ಸಾತ್ವಿಕರ ಪಾದಾಂಭುಜ ರಜಭಜಕರ ಭಜಕರೆಂಬಿನಿಸೆನ್ನ ॥೧॥ ಸಿರಿಗಂಧ ಕುಂಕುಮ ಸಾದು ಜವ್ವಾಜಿಕ | ಸ್ಮರಿತಿಲಕವನಿಡುವುದು ನಾನೊಲ್ಲೆ ಸಿರಿ ಊರ್ಧ್ವ ಪುಂಡ್ರ ದ್ವಾದಶನಾಮವಿಡುವರ ಪರಿಚಾರಕರ ಪರಿಚಾರಕರೆನಿಸೆನ್ನ ॥೨॥ ಸ್ವಾದು ಕಲ್ಪಿತವಾದ ಭಕ್ಷ್ಯ ಭೋಜ್ಯಗಳನು | ಹರಿಪ್ರಸಾದವನ್ನ ಉಣುವುದ

CC-O. Vidyaranya Math Book Centre, Sringeri

CC-O. In Public Domain. Digitized by eGangotri

ನೊಲ್ಲೆ ಓದಿ ಹೇಳುವ ಹರಿದಾಸರ ಪಾದತೀರ್ಥ ಪ್ರಸಾದವನುಣಿ
ಸೆನ್ನ ॥೧೩॥ ಕಾಲಕರ್ಮದೊಳುಪೇಕ್ಷೆಯು ಮಾಡಿ ಹರಿಭಕುತ ಶೀಲರಹಿತ
ಬ್ರಾಹ್ಮಣನಾಗಲೊಲ್ಲೆ ಶೀಲನರಿತು ಹರಿಭಕುತಿ ಮಾಳ್ಪಂ ಚಂ
ಡಾಲ ಮನೆಯು ಬಾಗಿಲ ಕಾಯಿಸೆನ್ನರು ॥೪॥ ಅರ್ಥ ವಿಷಯಂಗಳ ಫಲ
ವಬಯಸಿ ಪುಣ್ಯ ತೀರ್ಥಯಾತ್ರೆಯನು ಮಾಡುವುದನೊಲ್ಲೆ ದೈತ್ಯಮ
ರ್ದನ ಬಡದಾವಿ ಕೇಶವ ನಿನ್ನ ಕೀರ್ತನಗೈವರ ಸ್ತುತಿಕನೆಂದೆನಿಸೆನ್ನ ॥೫॥

೧೪ ರಾಗ ಕಾಂಬೋದಿ ಝಂಪತಾಳ

ನಾರಾಯಣ ಎಂಬ ನಾಮದ ಬೀಜವನು ನಾಲಿಗೆಯು ಕೂರಿಗೆಯು
ಮಾಡಿ ಬಿತ್ತಿರಯ್ಯ ॥ಪ॥ ಹೃದಯದ ಹೊಡವನು ಮಾಡಿ ತನುವ
ನೇಗಿಲು ಮಾಡಿ | ತನ್ನಿರಾ ಎಂಬ ಎರಡೆತ್ತ ಹೂಡಿ ಜ್ಞಾನವೆಂಬೊ
ಮಿಣಿಯ ಕಣ್ಣಿಹಗ್ಗವ ಮಾಡಿ ಮನವೆಂಬ ಧ್ಯಾನವ ನೋಡಿ ಬಿತ್ತಿರಯ್ಯ
॥೧॥ ಕಾಮಕ್ರೋಧಗಳೆಂಬ ಗಿಡಗಳಯು ತರಿರಯ್ಯ ಮದಮತ್ಸರವೆಂಬ
ಪೊದೆಯ ಇಯಿರಯ್ಯ ಪಂಚೇಂದ್ರಿಯಗಳೆಂಬ ಮಂಚಿಗೆಯ ಹಾಕೆರಯ್ಯ
ಚಂಡಲವೆಂಬ ಹಕ್ಕಿಯ ಓಡಿಸಿರಯ್ಯ ॥೩॥ ಉದಯಾಸ್ತಮಾನವೆಂಬ
ಎರಡು ಕೊಳಗವ ಮಾಡಿ | ಆಯುಷದ ರಾಸಿಯನು ಅಳೆಯಿರಯ್ಯ ಇದು
ಕಾರಣ ಕಾಗಿನೆಲೆಯಾದಿ ಕೇಶವನ ! ಮುದದಿಂ ನೆನೆದು ಸುಖಿಯಾಗಿ
ರಯ್ಯ ॥೪॥

೧೫ ರಾಗ ಸೌರಾಷ್ಟ್ರ ಮಟ್ಟೆತಾಳ

ನಾರಾಯಣ ಎನ್ನಿ ನಾರದವರದನ ನಾರಾಯಣ ಎನ್ನಿರೊ ವೇದ
ಪಾರಾಯಣನಾಗಿ ಕರಿಯ ಕಾಯ್ದಾತನ ನಾರಾಯಣ ಎನ್ನಿರೊ॥ಪ॥ ಶಿವನ
ವಾಚಿಯ ಮಾಡಿದವನ ಸೊಸೆಯ ಕಂದ | ನಾರಾಯಣ ! ಶಿವನ ತರುಬಿನಲಿ
ಶಿವನ ಕುಟ್ಟಿಸಿದಾತ | ನಾರಾಯಣ ! ಶಿವನೊಳಾಡಿ ತಾ ಶಿವ ವರ್ಜದಾ
ದಾತ | ನಾರಾಯಣ ಶಿವನ ಬಳಿಗೆ ಪೋಗಿ ಶ್ರೀಮಂತನಾದನ| ನಾರಾಯಣ
ವೆನ್ನಿರೊ ॥೧॥ ಗರುಡ ವಾಹನನಾಗಿ ಗಜರಾಜವರದನ | ನಾರಾಯಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಗರುಡನ ಗರಿಯೊಳ್ಪಲ್ಲಡಲ ತಂದಾತನ| ನಾರಾಯಣ | ಗರುಡ ಮಾತೆಯ ಅಣ್ಣನ ಮುಖ ಪಿಡಿದಾತನ | ನಾರಾಯಣ ಗರುಡ ಗಂಧರ್ವನಾಗಿಯೆ ಮೆರೆದಾತನ | ನಾರಾಯಣವೆನ್ನಿರೊ ॥೨॥ ಸ್ವರ್ಣಾಂಬರನಾಗಿ ಕರ್ಣ ಕುಂಡಲನಿಟ್ಟ | ನಾರಾಯಣ | ಸ್ವರ್ಣಕ್ಲಾಚನವಾದಿ ರಥದೊಳು ಪೊಕ್ಕವ ನಾರಾಯಣ| ಸ್ವರ್ಣ ಮಾಣಿಕವಾದ ರಥಿವೇರಿಕೊಂಡನ| ನಾರಾಯಣ ನಿರ್ಣಯವಿದು ಕಾಗಿನೆಲೆಯಾದಿ ಕೇಶವನ | ನಾರಾಯಣವೆನ್ನಿರೊ ॥೩॥

೧೬ ರಾಗ ಆರಭಿ ಆಟತಾಳ

ನಾರಾಯಣ ನಿನ್ನ ನಾಮವೊಂದಿರುತಿರೆ| ಬೇರೊಂದು ನಾಮವಿನ್ಯಾಕಯ್ಯ ॥ಪ॥ ನೆಟ್ಟನ ದಾರಿಯ ಬಟ್ಟೆಯೊಳಿರುತಿರೆ ಬೆಟ್ಟವ ಬಳಸಲಿನ್ಯಾಕಯ್ಯ | ಕಷ್ಟೆಶ್ವರ್ಯವು ವೃಷ್ಟಾನ್ನವಿರುತಿರೆ | ಬಿಟ್ಟ ಕೂಳನು ತಿನ್ನಲ್ಯಾಕಯ್ಯ ॥೧॥ ಪರುಶನೇಪಾಳಂಗಳಿರುತಿರೆ ಬೀದಿ | ಜರಿಗಲ್ಲ ತೊಳೆಯಲಿನ್ಯಾಕಯ್ಯ ಹರಿವಾಣದೊಳಗಮೃತಾನ್ನವು ಇರುತಿರೆ | ತಿರುಪೆ ಕೂಳನು ತಿನ್ನಲ್ಯಾಕಯ್ಯ ॥೨॥ ಬೆಲ್ಲವು ಕೆರುದೊಳಿರುತಿರೆ ಕಾಡ! ಕಲ್ಲನ್ನು ಕಡಿಯಲಿನ್ಯಾಕಯ್ಯ | ಬಲ್ಲದ ನೆಲೆಯೂದಿ ಕೇಶವನಿರುತಿರೆ | ಜೆಲ್ಲಿರೆ ದೈವದ ಹಂಬಲ್ಯಾಕಯ್ಯ ॥೩॥

೧೭ ರಾಗ ಮುಖಾರಿ ತಾಳ

ನಿಜವರಿತು ಲಿಂಗವನು ಪೂಜೆ ಮಾಡುವರ್ಯಾರು | ಇದು ನೇಮ ಖಂಡಿತವ ತಿಳಿದವರ ತೋರು ॥ಪ॥ ಆತ್ಮರೆಂಬವರ ತಳಗೆ ಅಮೃತ ಜಲು ಮಿಯು ತೆಗೆದು | ನೀತಿ ಮಾರ್ಗವೆಂತೆಂಬ ಕೊಡನು ಮಾಡಿ| ಕ್ರೋಧ-ಭೇದಗಳನ್ನು ಕಡಿದು ಕಣ್ಣಿಯು ಮಾಡಿ | ಭಕ್ತಿ ಮಾರ್ಗಗಳಿಗೆ ಅಗಡೆಯ ತಂದವರ ತೋರು ॥೧॥ ಕಾಯವಳ್ಳುಗಳಿಂದ ಮಾಯಪ್ಪಾಯವು ತಿಳಿದು | ಕಾರುಣ್ಯ ನೆಲೆಯೆಂಬೊ ಹುಲವನೆರದು| ಗಾಲಿಯಿಲ್ಲದ ಘಂಟಾನಾದ ಶಬ್ದವಕೇಳಿ | ಪೂರ್ಣ ಚಂದ್ರನ ಕಳೆಯ ತಿಳಿವವರ ತೋರು ॥೨॥ ಪಂಚ ತತ್ವಗಳೆಂಬ ಭಾಂಡಿಗಳಿವೆ [illegible] ಪರಮೇಶ್ವರವೆಂಬೊ ಒರಮನೆ

Sri Vishveshvaraiah Digital Library Centre, Bangalore

CC-O. In Public Domain. Digitized by eGangotri

ಯೊಳು | ಪಂಚಭೂತಗಳೆಂಬ ಭಯವು ಜಗಲಿಯನೇರಿ ಡ | ರಂಕ್ಕೋತಿ ಬೆಳಕಿನೊಳು ಪೂಜಿಸುವರ್ಯಾರು ॥೩॥ ಆತ್ಮವೆಂಬುದರೊಳಗಿ ಅಪ್ಪ ಜ್ಯೋತಿಯ ನಿಲಿಸಿ ಎಂಟು ಗಜಗಳು ಕಡಿದು ತಂದು ಬಿಸುಟು ನಿ | ರಂತರವ ಭೇರಿ ಘಂಟೆ ಶಬ್ದವು | ಅಂತರ ಆತ್ಮದಲ್ಲಿ ಪೂಜಿಸುವರ್ಯಾರು ॥೪॥ ವರದ ಬಂಕಾಪುರದ ಆದಿಕೇಶವ ಬಲ್ಲ | ಗುರುಸೂತ್ರದಾರಿಂದ ಶರಣುಬಲ್ಲ | ಸ್ಥಿರ ಬುದ್ಧಿಯಲ್ಲಿ ನೀವು ಸಾಧಿಸಿರೊ ಜನರೆಲ್ಲ | ಅರಿತು ನೋಡಿರೊ ಹಳೆಯ ಕನ್ನಡಿಯರೆಲ್ಲ ॥೫॥

೧೪ ರಾಗ ಧನ್ಯಾಸಿ ಆದಿತಾಳ

ನಿತ್ಯಪುರುಷೋತ್ತಮ ನ್ಯಾಯಂ ॥ಅಪ॥ ಮೃತ್ಯುಂಸಂಕಟ ಹರಣಂ ॥ಪ॥ ಇಹರಸಾಧನ ಕರುಣಾಕರಂ | ಶರಣಾಗತ ಜನಾಧಾರಂ ಸರಸಿಜ ಭವಭವರೋಗ ಸಂಹಾರಂ ' ಶ್ರೀ ಪುರುಷೋತ್ತಮ ಘೋರವಿ ಹಾರಂ॥೧॥ ಜ್ಞಾನ ಭಕ್ತಿ ವೈರಾಗ್ಯ ಸುಜಾತಂ | ಜನನಮರಣ ರಹಿತ ಜಲ ನಿಧಿಪೋತಂ | ಘನ ದಾರಿದ್ರ್ಯ ರವಿತಾದಾನಾಥಂ | ಅನುಶ್ರುತ ವೈಭವ ಮಂಗಲಗೀತಂ ಭೂರಿ ಭುವನ ಜೀವನಗುಣಂ ಗಂಭೀರ | ಸಾರಪಲ್ಲಿವನಿ ಕರಾಭರಣಂ ! ನಾಂದ ವಾಲ್ಮೀಕ್ಯಂತಃಕರಣಂ | ಬಡವಾದಿ ಕೇಶವ ನಾದ ನಿತ್ಯ ಸ್ಮರಣಂ ॥೫॥

೧೯ ರಾಗ ಶಂಕರಾಭರಣ ಭಾಪುತಾಳ

ನಿನಗಿಂತ ಕುಂದೇನೊ ನಮ್ಮಮ್ಮ ಜಯಲಕ್ಷ್ಮಿ ॥ಪ॥ ನಿನಗಿಂತ ಕುಂದೇನೊ ಸನಕಾದಿಗಳ ಸ್ವಾಮಿ ! ಮನಸಿಜನೊಡೆಯನೇ ಕನಕಗರ್ಭನ ಜನಕ ॥೧॥ ಮಚ್ಛಾವತಾರನಾದರೆ | ಆಕೆ | ಮಹ್ಯಕಂಗಳು ತಾನಾದಳು | ಬೆಟ್ಟವ ನೀನೊಂದು ಪೊತ್ತರೆ | ಆಕೆ ಬೆಟ್ಟದಂಥ ಕುಚಪೆರಡು ತಾ ವೊತ್ತಳು | ಮೆಟ್ಟಿ ಶೇಷನ ನೀ ತುಳಿದರೆ | ಆಕೆ ಕೊಟ್ಟ ಭಾಷೆಗೆ ಶೇಷ ನಿಲಿಸಾಳಯ್ಯ ॥೨॥ ಗುಜರಾಜವರದ ನೀನಾದರೆ | ಆಕೆ ಗಜಗಾಮಿನಿ ತಾನಾದಳು | ನಿಜದಿ ಸಿಹಿ ನೀನಾದರೆ | ಆಕೆ ಭಜಿಸಿ ಸಿಂಹ ಮಧ್ಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಳಾದಳಯ್ಯ ॥೩॥ ನೀಲವರ್ಣ ನೀನಾದರೆ ಆಕೆ ನೀಲಕುಂತಳೆ ತಾನಾ
ದಳು| ನೀ ಕಮಲ ಮುಖನು ಆದರೆ| ಆಕೆ ಬಾಲಕವ ಲಮುಖಿ ತಾನಾದಳು
॥೪॥ ಈ ಪರಿಯಲಿ ನೀನು ಜನಿಸಿದೆಯೊ | ನಮ್ಮ ಗೋಪಿಯರಾಮೋಹ ನೆಲಿ
ಸಿದೆಯೊ ಅಪಾರ ಮಹಿಮನೆ ಎನಿಸಿದೆಯೊ | ನಮ್ಮ ಶ್ರೀಪತಿ ನೆಲೆಯಾದಿ
ಕೇಶವರಾಯನೆ ॥೫॥

೨೦ ರಾಗ ಆನಂದಭೈರವಿ ಆಟತಾಳ

ನಿನ್ನ ನಾನೇನೆಂದೆನೊ | ರಂಗಯ್ಯರಂಗ | ಎನ್ನ ನೀ ಕಾಯಬೇಕು
॥ಪ॥ ನಿನ್ನ ನಾನೇನೆಂದೇ ನಿಗಮಗೋಚರ ಸ್ವಾಮಿ | ಪನ್ನಂಗಶಯನ
ಪಾಲ್ಗಡಲೊಡೆಯನೆ ರಂಗ॥೧॥ ಧೀರ ಸೋಮಕ ವೇದಚೋರ ತಮನ
ಸೀಳಿ | ವಾದಿಗಿಳಿದು ಪರ್ವತವ ನೆತ್ತಿ ! ಧಾರಿಣಿಯನು ಕದ್ದವನುಜದಲ್ಲಣ
ನಾದ| ನಾರಸಿಂಹ ನಿನಗೆ ಶರಣೆಂದೆನಲ್ಲದೆ! ನೀರ ಪೊಕ್ಕವನೆಂದೆನೆ | ಬೆನ್ನಿಲಿ
ಘನ | ಭಾರಸೋತ್ತವನೆಂದನೆ | ಮಣ್ಣನಗೆದು | ಬೇರ ಮೆದ್ದವನೆಂದನೆ |
ರಕ್ಕಸನೊಳು | ಹೋರಿ ಹೊಯ್ತನೆಂದು ಹೋಗಳಿದೆನಲ್ಲದೆ ॥೧॥ ಧರೆಯಾ
ದಾನವ ಬೇಡಿ ನೆಲನ ಈರಡಿ ಮಾಡಿ | ಪರಶು ಪಿಡಿದು ಕ್ಷತ್ರಿಯರ ಸವರಿ
ಹರಣದಿ ಪಾಷಾಣ ಹೆಣ್ಣು ಮಾಡಿದ ಪುಣ್ಯ | ಚರಿತ್ರ ಯಾದವಪತಿ ಶರಣೆಂದೆ
ನಲ್ಲದೆ ! ತಿರುಳ ಹಾರುವನೆಂದನೆ | ಹೆತ್ತ ತಾಯಿ ಶಿರವ ತರಿದೆನೆಂದನೆ| ವನ
ವಾಸಕ್ಕೆ | ಭರತಿ ಹರಿಸಿದನೆಂದನೆ ಪೊತನಿಯನು | ಸರಳು ಮಾಡದೆ ಕೊಂದ
ಹರಿಯೆನಂದಲ್ಲದೆ ॥೨॥ ಚಿತ್ತಜಕೋಟಿ ಲಾವಣ್ಯ ಮುಪ್ಪಿರದ | ಉತ್ತಮ
ಸ್ತ್ರೀಯರ ವ್ರತವಳಿದು | ಮತ್ತೆ ಕಲ್ಕಿಯಾಗಿ ಮಧ ಪರ ಕೆಡಹಿತ | ಹತ್ತಾವ
ತಾರದ ಹರಿಯೆಂದೆನಲ್ಲದೆ | ಬತ್ತಲೆ ನಿಂತವನೆಂದನೆ ॥೩॥

೨೧ ರಾಗ ಮುಖಾರಿ ಆಟತಾಳ

ನೀನಾರ ಬಾಂಧವನೊ ನಿಖಿಳಯಾದವರೊಳಗೆ | ಮಾನಾಭಿಮಾನ
ವೆಳ್ಳನಿತಿಲ್ಲ ಕಷ ॥ಪ॥ ದೇವಕೀದೇವಿಯದರದಿ ಜನಿಸಿ ಬಾಲ್ಯದಲಿ |
ಓದಿ ನೊಲೆ ಕೂಡಿಸದೆ ಆಸುವ ನಿಳಿದು | ಮಾವ ಕಾಸನ ಕೊಂದುಲುನುಜ

Sri Vidyabharathi Book Centre, Sringeri

CC-O. In Public Domain. Digitized by eGangotri

ವೇಷದ ತಾಳಿ । ಗಾಂ। ಡೀವಿಯರ ಮನೆಯ ಬಂಡಿಯ ಬೋವನಾದೆ ॥೧॥ ಸುರನದಿಯಸುತನು ಪಾಂಡವರಿಗಾಪ್ತನು ನಿನಗೆ । ಪರಮಭಕ್ತನು ಸ್ವಯ ಚ್ಛಾ ಮರಣಿಯು । ಧುರದೊಳಗ ಪೂರ್ವ ವೈರದ ಶಿಖಂಡಿಯ ತೋರಿ । ಶರ ಮಂಚದೊಳು ವಾಯದಲ್ಲಿ ಮಲಗಿಸಿದೆ ॥೨॥ ಸೋದರತ್ತೆಯ ಸೊಸೆಯ ಮಗ ನಿನಗೆ ಭಾವಿಸಲು । ಸೋದರಳಿಯನು ಮೂರು ಲೋಕವರಿಯೇ ಸಾಧಿಸಿಯೆ ಅಸಮ ಚಕ್ರವ್ಯೂಹವನು ರಚಿಸಿ । ಸೋದರನ ಪಡುರಥರ ಕೈಲಿ ಕೊಲ್ಲಿಸಿದೆ ॥೩॥ ಕರುಪತಿಯ ಮೈದುನನ ಕೊಲ್ಲ ಬಗೆದವನ ಸಂ। ಗರದೊಳೇರಿ ನುಡಿದ ನುಡಿಯ ಕೇಳ್ತು । ಪರಿದು ರವಿ ಮಂಡಲಕೆ ಮರೆಯ ಚಕ್ರದಿವಮಾಡಿ ನರನ ಕೈಯಿಂದ ಸೈಂಧವನ ಕೊಲ್ಲಿಸಿದೆ ॥೪॥ ಶಪಥದಲಿ ರಣದೊಳರಸನ ಹಿಡಿವೆ ನೆಂಬವಗೆ । ತಪಸಿಗಳ ತಂದು ತತ್ವವ ಬೋಧಿಸಿ । ಕಪಟವರಿಯದ ನೃಪತ ಕೈಯೊಳನೃತಪನಡಸಿ । ಉಪಮೆಯಲಿ ಶಸ್ತ್ರಪಂಡಿತನ ಕೊಲ್ಲಿಸಿದೆ ॥೫॥ ಯಮರನು ಪಡದೆ ತಾಯಿಗೆ ಸಹೋದರನು ಭೂ । ರಮಣರೊಳಗಗ್ಗಳೆಯ ನತಿ ಧೈರ್ಯನು । ಸಮರದಲಿ ರವಿಸುತನ ರಥಕೆ ಸೂತನ ಮಾಡಿ । ಯಮ ಸುತನ ಕೈಲಿ ಮಾನವದು ಕೊಲ್ಲಿಸಿದೆ ॥೬॥ ಜನವರಿಯದಂತೆ ಜೀವನದೊಳ ಡಗಿರ್ದವಗೆ । ಮನಕೆ ಖತಿಗೊಳಿಸು ಬರೆಸೆಳೆದು ನಗುತ ಅನುಪರದೊಳಾ ಯತದ ತೊಡೆಯಸನ್ನೆಯ ತೋರಿ । ಅನಿಲಜನ ಕೈಲಿ ಕೌರವನ ಕೊಲ್ಲಿಸಿದೆ ॥೭॥ ಉರಿಯೊಳಗೆ ಜನಿಸಿದಂಗನೆಯನಿಜಸುತರು ಮುಂ ದಿರದೊಳೈವರು ನಿಮ್ಮೈಗೈಯುತಿರಲು । ನರವೃಕೋದರ ಧರ್ಮನಂದನನಡನಗಲಿಸಿಯೆ । ಗುರು ಸುತನ ಕೈಲಿ ಬಾಲಕರ ಕೊಲ್ಲಿಸಿದೆ ॥೮॥ ಈ ವಿಧದೊಳವರ ಸುರಲೋಕ ದಲ್ಲಿ ನೆಲೆಗೊಳಿಸಿ । ಭಾವಮೈದುನರೈವರನು ರಕ್ಷಿಸಿ । ಭೂವಲಯದೊಳು ಕೀರ್ತಿ ಪಡೆದು ಎಸೆವ ನಮ್ಮ / ದೇವ ನೆಲೆಯಾದಿ ಕೇಶವ ವೆಂಕಟೇಶ ॥೯॥

೨೨ ರಾಗ ಕೇದಾರಗೌಳ ಝಂಪತಾಳ

ನೀನ ಪ್ರೀಯ ಮಾಡೆ ಬೇರೆ ಗತಿಯಾರಿನಗೆ । ನಿಗಮಗೋಚರ ಮುಕುಂದ । ಗಾನರಸಲೋಲ ಆಗಮತೀಲ ! ಭಕ್ತ ಪರಿಪಾಲ ಗೋಪಾಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಜಾಲ ॥ಪ॥ ಜಪತಪಾನುಷ್ಠಾನ ಜಪಿತನೆಂದೆನಿಸುನೆನೆ ! ಜ್ಞಾಣತನವೆನ್ನೊಳಿಲ್ಲ ಗುಪಿತದಿಂ ದಾನಧರ್ಮವನು ನಾ ಮಾಡುವೆನೆ ! ಅಪರಿಮಿತ ಧನವು ಇಲ್ಲ | ರಪಣ ನಿಪುಣತ್ವ ಜ್ಞಾಣತ್ವ ಇಲ್ಲದಿಹ ಕೃಪಣಗೆ ! ಸುಪವಿತ್ರ ನೀನೆ ಅಲ್ಲದೆ ಇಲ್ಲ | ಶ್ರೀನಲ್ಲ ॥೧॥ ಆನೆ ನೆಗಳಿಗೆ ಸಿಲುಕಿ ಆರೆಬಾಯ ಬಿದುತಲೆರೆ, ಮೌನದಿಂ ಬಂದು ಕಾಯ್ದೆ | ಹೇನಾರಗಾ ಎಂದ ಜಾಮಿಳಗೆ ಸಾಯಜ್ಯ | ನೀನೊಲಿದು ಕೃಪೆ ಮಾಡಿದೆ | ಹಾನಿಯಿಲ್ಲದ ಪದವಿ ನೀನಿತ್ತು ಧ್ರುವನಿಗೆ ದೀನತ್ವವನು ಬಿಡಿಸಿದೆ ದಾನವಾಂತಕ ಸಕಲ ದಿನಿಜಮುನಿವಂದ್ಯ ಅಭಿ ! ಮಾನಿ ಎನ್ನನೂ ಸಲಹಬೆ | ಬಾದೆ ॥೨॥ ಈ ಪಣತ್ರಯದ ಬಯಲಾಸೆಯಲಿ ಭ್ರಮೆಗೊಂಡು | ಬೇಸರದಿ ಮನದಿ ನೊಂದು | ಹೇಸಿಗೆ ಸಂಸಾರ ಮಾಯಕ್ಕೆ ಸಿಲುಕಿ ನಾ ಗಾಸಿ ಪಡಲಾರೆನಿಂನು | ವಾಸುದೇವನ ನಿನ್ನ ಪೊಂದಿ ಬದುಕುವೆನೆಂದು ಅಸೆ ಬಿಡುತಿಹೆನು ಇಂದು | ದಾಸನೆಂದೆನಿಸಿ ಡಂಗುರಹೊಯ್ಸಿ ಬಡದಾದಿ | ಕೇಶವನೆ ಕರುಣಿಸಿಂದು ಬಂದು ॥೩॥

೨೩ ರಾಗ ಪಂತುವರಾಳಿ ಛಾಪತಾಳ

ನೀನೇನು ಮಾಡಲಾಪೆ ನಾನು ಮುನ್ನ ಜನ್ಮ ಪಡೆದತದೆ ರಂಗ ॥ಪ॥ ನಾನಾ ಜನ್ಮದಿ ಬಹು ಯೋನಿಮುಖದಿ ಬಾಹೊ | ಹೀನತ್ವವನು ನೀನು ಕಳೆಯಲಾಪೆಯ | ನಾನು ನನ್ನದುಎಂಬ ಅಹಂಕಾರದಿರ್ಪೆನಿನ್ನ | ಧ್ಯಾನಿಸಲು ಬುದ್ಧಿಯ ಕೊಡಲಾಪೆಯ॥೧॥ ಉಬತವ್ ಗಿಹ ಪ್ರಾರಬ್ಧದೊಳಗೊಂದು | ಕಿಂಚಿತಾದರೂ ನೀನು ಕಳೆಯಲಾಪೆಯ | ಪಂಚೇಂದ್ರಿಯಗಳು ದೆಸೆದೆಸೆಗೆ ಎಳೆದಾಗ | ವಂಚನಿಲ್ಲದೆ ನೀನಡ್ಡ ಬರಲಾಪೆಯ ॥೨॥ ಸರಸಿಜೋದ್ಭವಗೆ ಬುದ್ಧಿಯ ಪೇಳಿ ಪಣೆಯೊಳು | ಬರೆದ ಬರೆಹವ ನೀನು ತೊಡೆಯಲಾಪೆಯ ಪರಬ್ರಹ್ಮ ಕಾಗಿನೆಲೆಯಾದಿ ಕೇಶವ ನಿನ್ನ | ಸ್ಮರಣೆಗೈಯಲು ಕಾಯ ದಿರಲಾಪೆಯ ॥೩॥

Sri Vidyabharathi Book Centre, Sringeri

CC-O. In Public Domain. Digitized by eGangotri

೨೪ ರಾಗ ಕಾಂಬೋದಿ ಝುಂಪತಾಳ

ನೀವಮಾಯೆಯೊಳಗೊ ನಿನ್ನೊಳು ಮಾಯೆಯೊ ॥ಪ॥ ನೀ ದೇಹ ದೊಳಗೊ ನಿನ್ನೊಳು ದೇಹವೋ ॥೧॥ ಬಯಲೊಳಗೆ ಆಲಯವೋ ಆಲ ಯದೊಳಗೆ ಬಯಲೊ ಬಯಲು ಆಲಯವೆರಡು ನಯನದೊಳಗೋ ನಯನ ಬುದ್ಧಿಯವಳಗೊ ಬುದ್ಧಿ ನಯನದ ಒಳಗೊ । ನಯನ ಬುದ್ಧಿಗಳಿ ರಡು ನಿನ್ನೊಳಗೊ ಹರಿಯೆ ॥೧॥ ಸವಿಯು ಸಕ್ಕರೆಯೊಳಗೋ ಸಕ್ಕ ರೆಯು ಸವಿಯೊಳಗೆ । ಸವಿಯು ಸಕ್ಕರೆಗಳೆರಡು ಜಿಹ್ವೆಯೊಳಗೊ ॥ ಜಿಹ್ವೆ ಬುದ್ಧಿಯ ಒಳಗೊ ಬುದ್ಧಿ ಜಿಹ್ವೆಯ ಒಳಗೋ । ಜಿಹ್ವೆ ಬುದ್ಧಿಗಳಿ ರಡು ನಿನ್ನೊಳಗೊ ಹರಿಯೆ ॥೨॥ ಕುಸುಮದೊಳು ಗಂಧವೋ ಗಂಧ ದೊಳು ಕುಸುಮವೋ । ಕುಸುಮ ಗಂಧಗಳೆರಡು ಪ್ರಾಣಿಯೊಳಗೋ ॥ ಅಸಮಭವ ಕಾಗಿನೆಲೆಯಾದಿ ಕೇಶವರಾಯ । ಉಸಿರಲೆನ್ನೊಶವೆ ಸರ್ವವು ನಿನ್ನೊಳ್ಪಿರಿಯೆ ॥೩॥

೨೫ ತ್ರೀರಾಗ ಆದಿತಾಳ

ಪರಮಪುರುಷ ಹರಿಗೋವಿಂದ । ಕಂವರದ ನಾರಾಯಣ ಗೋವಿಂದ ॥ಪ॥ ನಶಿವಸರಸುರನ ಉಸಿರ ತೊಲಗಿಸಿದೆ । ಕುಸುಮಶರನ ಪಿತ ಗೋವಿಂದ ॥ ರಸಪೂರಿತ ಶ್ರುತಿ ಮುಸುಳಿದಲೆ ತಂದು । ಬಿಸಜಸಂಭವ ನಿತ್ತೆ ಗೋವಿಂದ ॥೧॥ ಜತನ ತಪ್ಪತೆ ಅಮೃತ ಮಥನದಿ ॥ ಪರ್ವತನು ದ್ಧರಿಸಿದೆ ಗೋವಿಂದ । ಶತಕ್ರತುವಿನ ಸಿರಿ ಹತವಾಗ ಕಡಲನು । ಮಥಿಸಿ ನಿಲ್ಲಿಸಕೊಟ್ಟೆ ಗೋವಿಂದ॥೨॥ ಭೂತಳವೆರಸಿ ರಸಾತಳಕೆಳಸೆ । ಪಾತಾ ಳದಿ ಕಂಡೆ ಗೋವಿಂದ ॥ ಅತನೊಡನೆ ಕಾದಿ ಖ್ಯಾತಿಲಿ ಮಡ ಹಿಮ । ಹೀತಳವನು ತಂದೆ ಗೋವಿಂದ ॥೩॥ ದುರುಳ ಡೈತ್ಯನ ಸೀಳಿ ಕರುಳ ಮಾಲೆಯ ಮುಂ । ಗೆನರಳೊಳು ಧರಿಸಿದೆ ಗೋವಿಂದ । ಗರಳಕಂಧರ ವಿಧಿ ಕರವೆತ್ತಿ ಪೊಗಳಲು । ತರಳಗಭಯವಿತ್ತೆ ಗೋವಿಂದ ॥೪॥ ತಾಮನನಾಗಿ ನಿಸ್ಸೀಮ ಬಲಿಯ ಕೈಯ । ಭೂಮಿಯಳೆದು ಕೊಂಡೆ ಗೋವಿಂದ॥ ತಾಮರ ಸೋದ್ಭವಾಂಡವೊಡೆದು ನಿಂದು । ವ್ಯೋಮಗಂಗೆಯ ಪತ್ತೆ ಗೋವಿಂದ

Sri Vijayabharathi Book Centre, Sringeri

CC-O. In Public Domain. Digitized by eGangotri

॥೫॥ ವರಪರಶುಧರನಾಗಿ ಭೂಪರ ಧಿ । ಕ್ಕರಿಸಿ ಸಂಹರಿಸಿದೆ ಗೋವಿಂದ ॥ ತರಹರಿಸದೆ ವಸುಂದರೆಯನೆಲ್ಲಿವ ಭೂ । ಸುರರಿಗೊಪ್ಪಿಸಿ ಕೊಟ್ಟೆ ಗೋವಿಂದ ॥೬॥ ತ್ರಿನಯನೊಲಿಸಿ ರಾವಣನು ರಣಾಂ । ಗಣದೊಳ ಗೊರೆಸಿದೆ ಗೋವಿಂದ ॥ ಕ್ಷಣವೆನಿಸದೆ ಮಣಿಪುರದಲಿ ವಿಭೀ । ಷಣಗೆ ಶಾಶ್ವತವಿತ್ತೆ ಗೋವಿಂದ ॥೭॥ ವಾನಣದಂತವಿದಾರೆಣ ಕಂಸ ಸಂ। ಹಾರಣ ಭುಜಬಲ ಗೋವಿಂದ ದಾರಣಾಪುರವತಿದಾರಣಪ್ರಿಯ ಭೂ । ಭಾರೋತ್ತಾರಣ ಗೋವಿಂದ ॥೮॥ ಕಥೆಯು ನಿರ್ಮಿಸಿ ಪತಿವ್ರತೆಯರಲ್ಲ ಬಲ್ಲು । ವ್ರತಗಳ ಕೆಡಿಸಿಬೆ ಗೋವಿಂದ ॥ ಜತನದಿಂದ ತ್ರಿಪುರವನರುಹಿ ದೇ। ವತೆಗಳ ಸಲಹಿನೆ ಗೋವಿಂದ ॥೯॥ ವಜಿಯ ಮುರುಳದಿ ತೇಜದಲೇರಿ ಕ । ನೋಜು ರಾವುತನಾದೆ ಗೋವಿಂದ ॥ ವಜಿಯ ಬೆನ್ನೊಳು ರಾಜಿಪ ಗುಳದಂತೆ । ಈ ಜಗದೊಳಗಿಪ್ಪೆ ಗೋವಿಂದ ॥೧೦॥ ಮೇದಿನಿಗೋಸುಗ ಕಾದಿ ಕಲಹದಿ ವಿ । ರೋಧಿಗಳನು ಕೊಂದೆ ಗೋವಿಂದ ಸಾಧುಗಳಿಗೆ ಸುಖವೈದಿಪ ಕಾಗಿನೆಲೆ ಯಾದಿ ಕೇಶವರಾಯ ಗೋವಿಂದ ॥೧೧॥

೨೬ ರಾಗ ಪೂರ್ವಿ ಆಟತಾಳ

ಬಂದೆವಯ್ಯ ಗೋವಿಂದಶೆಟ್ಟ । ನಿನ್ನ ಹರಿವಾಣ ತೀರ್ಥ ಪ್ರಸಾದ ಉಂಟಿನಲಾಗಿ ॥ಪ॥ ಅಪ್ಪವು ಅತಿರಸ ತುಪ್ಪವು ಬಿಸಿ ಹಾಲು । ಒಪ್ಪುವ ಸಕ್ಕರಿ ಯಾಲಕ್ಕಿಯು ಅಪರೂಪವಾದ ಕಜ್ಜಾಯಗಳನ್ನೆಲ್ಲ ಭಪ್ಪನ್ನ ದೇಶಕೆ ಮೂರುವ ಸೆಟ್ಟ ॥೧॥ ಒಡೆದ ಮಡಕ್ಕೆ ತಂದು ಇಡಿದು ನಾಮವ ಮಾಡ್ವಿ। ಕೊಡುವೆ ನೀ ಕಾಸಿಗೆ ಒಂದೊಂದನು ಜಡಿಲ ತುಂಬಿ ಮಿಕ್ಕ ಅನ್ನವ ಮಾರಿಸಿ ಒಡವೆಯ ಗಳಿಸುವ ಕಡು ಲೋಭಿ ಸೆಟ್ಟ ॥೨॥ ಶೇಷಗಿರಿ ಯಲ್ಲಿ ವಾಸವಾಗಿಹ ಸೆಟ್ಟ । ದೇಶದೇಶಕ್ಕೆ ಹೆಸರಾದ ಸೆಟ್ಟ । ಕಾಸುಕಾಸಿಗೆ ಬಡ್ಡಿ ಗಳಿಸಿಕೊಂಬ ಅತಿ । ಕೇಶವ ನಾರಾಯಣ ತಿಮ್ಮಸೆಟ್ಟ ॥೩॥

೨೭ ರಾಗ ಮುಖಾರಿ ಝಂಪತಾಳ

ಬಡುಕಿದೆ ಭವ ಬಡಿಸಿದೆ ಎನಗೆ ಹೇಗಿತು ॥ಪ॥ ಪದುಮ ನಾಭನ ಪಾದದೊಲುಮೆ ಎನಗಾಯಿತು ॥ಅ॥ ಹರಿತೀರ್ಥ ಪ್ರಸಾದ ಎನ್ನ

Vidyaranya Bharathi Book Centre, Sringeri

CC-O. In Public Domain. Digitized by eGangotri

ಜಿಹ್ವೆಗೊದಗಿತು | ಹರಿಯು ನಾಮಾಮೃತ ಕೆವಿಗೊದಗಿತು ಹರಿಯುದಾ
ಸರು ಎನ್ನ ಬಂಧು ಬಳಗಾದರು | ಹರಿಯ ಶ್ರೀಮುದ್ರೆ ಆಭರಣವಾಯಿತು
॥೧॥ ಮುಕುತರಾದರು ಎನ್ನ ನೂರೊಂದು ಕುಲದವರು ! ಮುಕುತಿ
ಮಾರ್ಗಕೆ ಯೋಗ್ಯ ನಾನಾದೆನೋ ॥ ಆಕಳಂಕ ಶ್ರೀಹರಿ ಭಕುತಿಗೆ ಮನ
ಬೆಳೆದು ರುಕುಮಿಣಿಯರಸ ಕೈವಶನಾದ ಎನಗೆ ॥೨॥ ಇಂದೆನ್ನ ಜೀವಕ್ಕೆ
ಸಕಲ ಸಂಪದವಾಯಿತು | ಮುಂದೆನ್ನ ಜನ್ಮ ಸಫಲವಾಯಿತು ॥ ತಂದೆ
ಶ್ರೀ ಕಾಗಿನೆಲೆಯಾದಿ ಕೇಶವರಾಯ | ಬಂದೆನ್ನ ಹೃದಯದಲ್ಲಿ ನೆಲೆಯಾಗಿ
ನಿಂತ ॥೩॥

೨೮ ರಾಗ ಆಹಾಣ ಆಟತಾಳ

ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ ॥ಪ॥ ಕೂಗಿದರು
ಧ್ವನಿ ಕೇಳಲಿಲ್ಲವೇ ನರಹರಿಯೇ ॥ಅ॥ ಪರಮ ಪದದೊಳಗೆ ವಿಷವಿಧರನ
ತಪ್ಪದದಲಿ ನೀ ಸಿರಿಸಹಿತ ಕ್ಷೀರವಾರಧಿಯೊಳಿರಲು | ಕರಿರಾಜ ಕಷ್ಟದಲಿ
ಆದಿಮೂಲ ಎಂದು | ಕರಿಯಲಾ ಕ್ಷಣ ಬಂದು ಒದಗಿದೆಯೊ ನರಹರಿಯೆ
॥೧॥ ಕಡು ಕೋಪದಿಂ ಖಳನು ಖಡ್ಗವನೆ ಪಿಡಿದು ನೀ | ನ್ನೊಡೆಯನೆಲ್ಲಿಹ
ನೆಂದು ನುಡಿಯೆ | ದೃಢ ಭಕುತಿಯಲಿ ಶಿಶುವು ಬಿಡದೆ ನಿನ್ನನ್ನ ಭಜಿಸೆ |
ಸಡಗರದಿ ಸ್ತಂಭದಿಂದೊಡದೆ ನರಹರಿಯೆ ॥೨॥ ಯಮಸುತನ ರಾಣಿ
ಗಕ್ಷಯ ಮನವವಿತ್ತೆ | ಸಮಯದಲಿ ಅಜಮಿನಳ ಪೊರದೆ ॥ ಸಮಯಾ
ಸಮಯಪುಂಟೆ ಭಕ್ತವತ್ಸಲ ನಿನಗೆ | ಕಮಲಾಕ್ಷ ಶ್ರೀ ಕಾಗಿನೆಲೆಯಾದಿ
ಕೇಶವನೆ ॥೩॥

೨೯ ರಾಗ ಮೋಹನ ಆದಿತಾಳ

ಬಾ ರಂಗ ಎನ್ನ ಮನಕೆ ಭಾವಜಕಯ್ಯ ॥ಪ॥ ಭಾವ ಮೈದುನ ಭಾವ
ಬೀಗದ ತನುಜ | ಮಾವನ ಮಡದಿಯ ಮೊಮ್ಮಗಳ ಗಂಡ ॥೧॥ ಅತ್ತೆ
ಮೈದುನ ಬಾರೊ ಅತ್ತೆಯ ಮಗಳ ಗಂಡ ! ಅತ್ತಿಗೆ ನೀಲತ್ತಿಗೆ ಮೊಮ್ಮ
ಗಳ ಗಂಡ ॥೨॥ ಅಂಬುಜಾಕ್ಷಯ್ಯ ಬಾರೊ ಆದಿ ಮಾರುತಿ ರಂಗ | ಕಂಭ
ದಿಂದೊಡೆದು ಬಂದ ಆದಿಕೇಶವ ರಂಗ ॥೩॥

Sri Vidyabharathi Book Centre, Sringeri

CC-O. In Public Domain. Digitized by eGangotri

೩೦ ರಾಗ ಆನಂದ ಭೈರವಿ ಆಟತಾಳ

ಬಾಲಕನೆಂದೆತ್ತಿಕೊಂಡೆನೆ | ಗೋಪಾಲಕೃಷ್ಣನ | ಬಾಲಕನೆಂದೆತ್ತಿ ಕೊಂಡೆನೆ ॥ಪ॥ ಬಾಲಕನೆಂದೆತ್ತಿಕೊಂಡೆಲೆ | ಶ್ರೀಲತ್ಕಾಂಗರ ಲೋಲ ಸೀರೆ | ವಾರಿ ಮಾಡಿ ನೋರೆ ನೋಡಿ | ಮಾದನಾಟವನಾಡಿ ಪೋದನೆ ॥ಅ॥ ಹೊತ್ತರಿದ್ದು ಮನೆಗೆ | ಬಂದನೆ | ಯಶೋದೆ | ಕೇಳಿ | ಎತ್ತಿಕೊಂಡು ಮುತ್ತುಕೊಟ್ಟೇನೆ | ಎತ್ತಿಕೊಂಡು ಮುತ್ತುಕೊಟ್ಟರೆ ! ಮುತ್ತಿನ್ಹಾರವ ಕೊರಳಿಗ್ಹಾಕ್ಷಚಿತ್ರ ಜನ ಕೇಳಿಯೋಳು | ಬತ್ತಲೆ ನಿಂದತ್ತು ಎಂದನೆ ॥೧॥ ಗಿಂಡನಂತೆ ಮನೆಗೆ ಬಂದನೆ | ಯಶೋದೆ ಕೇಳಿ | ಕಣ್ಣು ಸನ್ನೆಯಿಂದ ಕರೆದನ ಪುಂಡುತನವ ಮಾಡಿಯೆನ್ನ | ದುಂಡು ಕುಡವ ಕರದಿ ಪಿಡಿದು ಬಂಡು ಮಾಡಿ ಪೋದನಮ್ಮ | ಪುಂಡರೀಕಾಕ್ಷಿಯೇ ರಮಣನು ॥೨॥ ಏಸು ನೋಸವ ಕಲಿತಿಹನಮ್ಮ | ಯಶೋದೆ ಕೇಳೆ ! ವಾಸುದೇವನಲ್ಲವೇನಮ್ಮ | ಹಾಸುಮುಂಜ ಹಾಸಿಗೆಯೊಳು | ಶ್ರೀಶ ಕೈಯ ಪೀಡಿದು ಸೆಳೆದು ಆಸೆ ತೋರಿಸಿ ನೋಸಗೊಳಿಸಿದ | ಆದಿಕೇಶವರಾಯ ನಮ್ಮ ॥೩॥

... ಸಮಾಪ್ತಿ ...

— ಪ್ರಕಾಶಕರು —

ಎ. ಎಂ. ಕರಡಿ ಆ್ಯಂಡ ಸನ್ಸ
ಬುಕ್ ಸೆಲ್ಲರ್ಸ್. ಸ್ಟೇಶನ್ ರೋಡ್ ಹುಬ್ಬಳ್ಳಿ.

ಆಶೋಕ ಪ್ರಿಂಟಿಂಗ್ ಪ್ರೆಸ್, ಸ್ಟೇಶನ್ ರೋಡ, ಹುಬ್ಬಳ್ಳಿ.

1985 1-00

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಪ್ರಕಟಣೆಗಳು

ಶಿವ ಮಹಾಪುರಾಣ
ಮಹಾಭಾರತ
ವಾಲ್ಮೀಕಿ ರಾಮಾಯಣ
ಶ್ರೀ ವಿಷ್ಣು ಪಂಚಾವತಾರ ಕಥೆ
ಹರಿಕಥಾಮೃತಸಾರ
ಗುರು ಚರಿತ್ರೆ
ಸಿದ್ಧಾರೂಢ ಚರಿತ್ರೆ
ಸರ್ವ ಜ್ಯೋತಿಷ್ಯ ರತ್ನ
ಸರ್ವ ವೈದ್ಯ ರತ್ನ
ಬಸವರಾಜ ವಿಜಯ
ಜ್ಯೋತಿಷ್ಯ ಸರ್ವ ವಿಷಯಾಮೃತ
ವಾಸ ಬೋಧೆ
ಇಂದ್ರಜಾಲ ಮಹೇಂದ್ರಜಾಲ
ಯಕ್ಷಿಣಿ ವಿನೋದ
ಪುರಂದರದಾಸರ ಪದಗಳು ದೊಡ್ಡದು
ವಿಜಯನಗರ ಸಾಮ್ರಾಜ್ಯ
ಹಸ್ತ ಸಾಮುದ್ರಿಕ ಶಾಸ್ತ್ರ
ತಕ್ಕಸೇನ ರಾಜಪುತ್ರನ ಕಥೆ
ಸರ್ವ ವಿದ್ಯಾ ಬೋಧೆ
ವಶೀಕರಣ
ವಿಚಾರ ಚಂದ್ರೋದಯ
ಕನಕದಾಸರ ಚರಿತ್ರೆ
ಸ್ವಾಮಿ ವಿವೇಕಾನಂದರ ಚರಿತ್ರೆ
ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆ
ರೇವಣಸಿದ್ಧ ಯೋಗ ತಂತ್ರ
ಅಡಿಗೆಮನೆ ವೈದ್ಯ
ಪತಿವ್ರತೆಯರ ಕಥೆಗಳು
ಇಸೋಪನ ನೀತಿ ಕಥೆಗಳು
ಶಿವಶಕ್ತಿ ಕಾಲಜ್ಞಾನ
ಶೃಂಗಾರ ಶುಕಸಂವತಿ ಕಥೆಗಳು
ಭೋಜರಾಜ ಕಾಳಿದಾಸರ ಕಥೆಗಳು
ಅಕಬರ ಬೀರಬಲ್ಲರವಿನೋದಕಥೆಗಳ
ವಿಕ್ರಮ ಬೇತಾಳ ಪಂಚವಿಂಶತಿ ಕಥೆಗಳು
ಸಚಿತ್ರ ಯಮಶಾಸನ (ಪಾಪ ಪುಣ್ಯದ ಕಥೆಗಳು)
ಪ್ರಶ್ನೆ ಫಲ ದರ್ಪಣ
ಗುಲಬಕಾವಲಿ ಕಥೆ
ಯೋಗಾಸನಗಳು
ಸೂರ್ಯ ನಮಸ್ಕಾರ
ನವೀನ ಪಾಕಶಾಸ್ತ್ರ
ಶ್ರೀ ಅಥಣಿ ಶಿವಯೋಗಿಗಳ ಚರಿತ್ರೆ
ಪಶು ವೈದ್ಯ ಸಂಜೀವಿನಿ
ವೆಂಕಟೇಶ ಮಹಾತ್ಮೆ
ಶಿಶುನಾಳ ಶರೀಫ ಸಾಹೇಬರ ತತ್ವಪದ
ಶ್ರೀ ರಾಘವೇಂದ್ರ ಚರಿತ್ರೆ
ಕನ್ನಡ-ಇಂಗ್ಲೀಷ ಸ್ವಯಂ ಶಿಕ್ಷಕ
ಕನ್ನಡ-ಹಿಂದಿ ಸ್ವಯಂ ಶಿಕ್ಷಕ

ಎಂ. ಎಸ್. ಕಲಬುರ್ಗಿ ಅಂಡ್ ಸನ್ಸ್, ಹುಬ್ಬಳ್ಳಿ
Sri Vidyabharathi Book Centre, Sirsi